11.50 ಪಿ.ಎಂ

ಶ್ರೀ ಸಿ.ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ಶ್ರೀರಂಗಪಟ್ಟಣ-ಬೀದರ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಡಾಬಸ್‌ಪೇಟೆ ಮೂಲಕ ಹೋಗುವ ರಸ್ತೆಯೂ ಕೂಡ ಸೇರಿದೆ. ಡಾಬಸ್‌ಪೇಟೆಯಿಂದ ಆ ಹೆದ್ದಾರಿ ಹಾದುಹೋಗಬೇಕಾದರೆ ಅಲ್ಲೊಂದು ರೈಲ್ವೆ ರಸ್ತೆ ಇದೆ. ಆ ರಸ್ತೆಯ ಓವರ್ ಬಿಡ್ಜ್‌ಗೋಸ್ಕರ 40 ಲಕ್ಷ ರೂಪಾಯಿಗಳನ್ನು 1997ನೇ ಇಸವಿಯಲ್ಲಿ ರೈಲ್ವೆ ಇಲಾಖೆ ಬಿಡುಗಡೆ ಮಾಡಿದೆ. ಇವತ್ತಿಗೂ ಕೂಡ ಆ ಓವರ್ ಬಿಡ್ಜ್ ಕಾಮಗಾರಿಯನ್ನು ಕೈಗೆತ್ತಿಕೊಂಡಿಲ್ಲ. ಸುಮಾರು 15-20 ಜನ ಅಲ್ಲಿ ಸಾಯುತ್ತಿದ್ದಾರೆ. ಅಲ್ಲಿ ಶಿವನ ದೇವಸ್ಥಾನಕ್ಕೆ ಹೋಗಬೇಕಾದ ತಿರುವು ಬರುತ್ತದೆ. ಅಲ್ಲಿ ಪ್ರತಿಯೊಬ್ಬ ನಾಗರೀಕನಿಗೂ ತೊಂದರೆಯಾಗುವಂತಹ ತುಮಕೂರು ಹೆದ್ದಾರಿ ಇದೆ. ಮಾನ್ಯ ಸಚಿವರು ಅನೇಕ ಸಾರಿ ದೇವಸ್ಥಾನಕ್ಕೆ ಹೋಗಿದ್ದಾರೆ. ಆ ಒಂದು ರೈಲ್ವೆ ಓವರ್ ಬಿಡ್ಜ್ ಅನ್ನು ಕೂಡಲೇ ಮಾಡಿಸಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಡಾಬಸ್‌ಪೇಟೆ ಮೂಲಕ ಹಾದುಹೋಗುವ ನ್ಯಾಷನಲ್ ಹೈವೇ ನಂಬರ್ 207ರ ಬಗ್ಗೆ ಹೇಳುತ್ತಿದ್ದಾರೆ. ಮತ್ತೊಂದು ತುಮಕೂರಿನಿಂದ ಹೊನ್ನಾವರಕ್ಕೆ ಹೋಗುವಂತಹ ರಾಷ್ಟ್ರೀಯ ಹೆದ್ದಾರಿ ರಸ್ತೆ ನಂಬರ್ 206 ಇದೆ. ಬೆಂಗಳೂರಿನಿಂದ ಹೊನ್ನಾವರಕ್ಕೆ ಹೋಗತಕ್ಕಂತಹ ರಾಷ್ಟ್ರೀಯ ಹೆದ್ದಾರಿ ರಸ್ತೆ ಸಂಖ್ಯೆ 4 ರಲ್ಲಿ ಇವತ್ತು ನ್ಯಾಷನಲ್ ಹೈವೇ ಅಥಾರಿಟಿಯವರು ಫೋರ ಲೈನ್ ಮಾಡುತ್ತಿದ್ದಾರೆ. ನ್ಯಾಷನಲ್ ಹೈವೇ ನಂಬರ್ 207ರಲ್ಲಿ 94 ಕಿ.ಮೀ. ರಸ್ತೆ ಆಗುತ್ತಿದೆ. ಬಿಕ್ಕಬಳ್ಳಾಪುರದಿಂದ ದೇವನಹಳ್ಳಿ ಬರುವ ಕಡೆಗೆ ಸಿಕ್ಸ್ ರೈಸ್ ಮಾಡುತ್ತಿದ್ದಾರೆ. ಮಾನ್ಯ ಪ್ರಧಾನಮಂತ್ರಿಗಳ ವಿಶೇಷವಾದ ಕಾರ್ಯಕ್ರಮದ ಅಡಿಯಲ್ಲಿ ದೇಹಲಿಯಿಂದ ಬಾಂಬೆ, ಬಾಂಬೆಯಿಂದ ಚೆನ್ನೈ, ಚೆನ್ನೈಯಿಂದ ಕಲ್ಕತ್ತಾ, ಕಲ್ಕತ್ತಾದಿಂದ ದೆಹಲಿಗೆ ಹೋಗಲು ನಿರ್ಮಿಸಲಾಗುತ್ತಿರುವ ಹೆದ್ದಾರಿಗಳಲ್ಲಿ ಕರ್ನಾಟಕ ರಾಜ್ಯಕ್ಕೆ 625 ಕಿ.ಮೀ. ಸಿಗುತ್ತಿದೆ. ಇಲ್ಲಿ ಫೋರ್ ಲೈನ್ ಮತ್ತು ಸಿಕ್ಸ್ ಲೈನ್‌ಗಳನ್ನು ನಿರ್ಮಿಸಲು ನ್ಯಾಷನಲ್ ಹೈವೇ ಅಥಾರಿಟಿಯವರು 3,200 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಿದ್ದಾರೆ.

ಗುಲ್ಬರ್ಗ ಜಿಲ್ಲೆಯ ಸೇಡಂ ಹಾಗೂ ಚಿತ್ತಾಪುರ ತಾಲ್ಲೂಕಿನಲಿ ನೆಡುತೋಪು ಬೆಳಸಿರುವುದು

134 (1183) ಶ್ರೀ ಬಸವಂತರೆಡ್ಡಿ ಮತಕಪಲ್ಲಿ (ಸೇಡಂ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ಗುಲ್ಬರ್ಗಾ ಜಿಲ್ಲೆಯ ಸೇಡಂ ಹಾಗೂ ಚಿತ್ತಾಪುರ ತಾಲ್ಲೂಕಿನ 11 ಗ್ರಾಮಗಳ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯವರು ಅರಣ್ಯ ಸರ್ವೆ ಸಂಬರುಗಳಲ್ಲಿ ಹಾಗೂ ಗೈರಾಣ ಸರ್ವೆ ನಂಬರುಗಳಲ್ಲಿ ಗಿಡಗಳನ್ನು ನೆಡಲು ಖರ್ಚು ಮಾಡಿರುವ ಮೊತ್ತವೆಷ್ಟು? (ಗ್ರಾಮವಾರು ವಿವರ ನೀಡುವುದು.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಅನುಬಂಧದಲ್ಲಿ ವಿವರಗಳನ್ನು ಲಗತ್ತಿಸಲಾಗಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ, ಸೇಡಂ ಇವರ ಪ್ರಶ್ನೆಸಂಖ್ಯೆ : 1183ಕ್ಕೆ ಸಂಬಂಧಪಟ್ಟಂತೆ ಸೇಡಂ ತಾಲ್ಲೂಕ್ ಮತ್ತು ಚಿತ್ತಾಪುರ ತಾಲ್ಲೂಕಿನಲ್ಲಿ ನಡುತೋಪನ್ನು ಬೆಳೆಸಿದ ವಿವರವನ್ನು ತೋರಿಸುವ ಪಟ್ಟಿ.

1. ಸೇಡಂ ತಾಲ್ಲೂಕಿನ ನೆಡುತೋಪಿನ ವಿವರ :

ವರ್ಷ : 1997-98

ಕ್ರಮ ಸಂಖ್ಯೆ	ಸ್ಥಳದ ಹೆಸರು	ನೆಡುತೋಪಿನ ವಿಸ್ತೀರ್ಣ (ಹೆ: ಕಿ.ಮೀ)	ಖರ್ಚು ಮಾಡಿದ ಹಣ (ರೂ. ಲಕ್ಷಗಳಲ್ಲಿ)
1.	ಹಂದರಕಿ	10	0.85
2.	ಕಿಸ್ತಾಪಏಟ	08	0.68
3.	ಹಂದರಕಿ	06	0.51
4.	ಮೆದಕ-ಶಿಲಾರಕೋಟ	05	0.42
5.	ಕಾನಗಡ್ಡಾ	07	0.60
6.	ದುಗನೂರ	07	0.59
7.	ಶಿಲಾರಕೋಟ	13	1.05
8.	ದುಗನೂರ	07	0.60
9.	ಅಲ್ಲಿಪೂರ	10	0.85
10.	ಚಂದಾಪುರ	05	0.615
11.	ಕಡತಾಳ	20	2.243
12.	ಮುದ್ದೊಳ	78	7.410
13.	ಕೊತಪಳ್ಳಿ	22	2.090
	ಒಟ್ಟು	198	18.508

ವರ್ಷ : 1998 - 99

ಕ್ರಮ ಸಂಖ್ಯೆ	ಸ್ಥಳದ ಹೆಸರು	ನೆಡುತೋಪಿನ ವಿಸ್ತೀರ್ಣ (ಹೆ: ಕಿ.ಮೀ)	ಖರ್ಚು ಮಾಡಿದ ಹಣ (ರೂ. ಲಕ್ಷಗಳಲ್ಲಿ)
1.	ಸೇಡಂ-ಮುಧೋಳ	05 ಕಿ.ಮೀ	0.65
2.	ಸೇಡಂ-ನಿಡಗುಂದಾ	03 ಕಿ.ಮೀ	0.39
3.	ಮಳಖೇಡ- ನಿಡಗುಂದಾ	05 ಕಿ.ಮೀ	0.40
4.	ಯಾನಾಗುಂದಿ-ಮೇದಕ	08 ಕಿ.ಮೀ	0.64
5.	ಬಟಗೇರಾ-ಕುರಕುಂಟಾ ಫ್ಯಾಕ್ಟರಿ	10 ಕಿ.ಮೀ	0.75
6.	ಯಾನಾಗುಂದಿಟೆಂಪಲ್	35 ಹೆ	2.80
7.	ಸಕಲೇಶಪುರ	20 ಹೆ	1.60
8.	ಶಿಲಾರಕೋಟ	10 ಹೆ	0.80
9.	ಕೊಡ್ಲಾ	01 ಹೆ	0.05
10.	ಮುಧೋಳ	01 ಹೆ	0.05
11.	ಮಳಖೇಡ	01 ಹೆ	0.05
12.	ಕಿಸ್ತಾಪೂರ	10 ಹೆ	0.30
13.	ಶಿಲಾರಕೋಟ	10 ಹೆ	0.30
14.	ಶಿಲಾರಕೋಟ-ರಿಬ್ಬನಪಲ್ಲಿ	05 ಕಿ.ಮೀ	0.65
15.	ಕೆಇಬಿ ಏರಿಯಾ ಸೇಡಂ	25 ಹೆ	1.95
16.	ಕೂಡ್ಲಾ	30 ಹೆ	2.35
17.	ಹಂದರಕಿ- 1	23 ಹೆ	1.84
18.	ಹಂದರಕಿ-2	10 ಹೆ	0.80
19.	ಸೇಡಂ-ನೀಲಹಳ್ಳಿ	06 ಕಿ.ಮೀ	0.78
	ಒಟ್ಟು	218	18.15

ವರ್ಷ : 1999 - 2000

ಕ್ರಮ ಸಂಖ್ಯೆ	ಸ್ಥಳದ ಹೆಸರು	ನಡುತೋಪಿನ ವಿಸ್ತೀರ್ಣ (ಹೆ: ಕಿ.ಮೀ)	ಖರ್ಚು ಮಾಡಿದ ಹಣ (ರೂ. ಲಕ್ಷಗಳಲ್ಲಿ)
1.	ಸೇತಂ-ಕೂಡ್ಲಾ	12 ಕಿ.ಮೀ	1.80
2.	ಬುರುಗಪಲ್ಲಿ	14 ಹೆ	1.26
3.	ಯಾದಗಾ ರಸ್ತೆ	14 ಕಿ.ಮೀ	2.05
4.	ಮುಧೋಳ ರಸ್ತೆ	07 ಕಿ.ಮೀ	0.63
5.	ಬಟಗೇರಾ ರಸ್ತೆ	03 ಕಿ.ಮೀ	0.45
6.	ಮಲ್ಲಾಬಾದ	10 ಹೆ	0.85
7.	ಮುಧೋಳ	05 ಹೆ	0.45
8.	ಮಳಖೇಡ	05 ಹೆ	0.45
9.	ಯಾದಗಾ	05 ಹೆ	0.45
10.	ಮಳಖೇಡ ರಾಜಶ್ರೀ ಫ್ಯಾಕ್ಟರಿ	07 ಕಿ.ಮೀ	1.05
11.	ಸೇತಂ ರಾಜಶ್ರೀ ಫ್ಯಾಕ್ಟರಿ	10 ಕಿ.ಮೀ	0.90
12.	ಹಂದರಕಿ	20 ಕಿ.ಮೀ	1.65
	ಒಟ್ಟು	112	11.99

2. ಚಿಂತ್ರಾಪುರ ತಾಲ್ಲೂಕಿನ ನಡುತೋಪಿನ ವಿವರ :

ವರ್ಷ : 1998 -98

ಕ್ರಮ ಸಂಖ್ಯೆ	ಸ್ಥಳದ ಹೆಸರು	ನಡುತೋಪಿನ ವಿಸ್ತೀರ್ಣ (ಹೆ: ಕಿ.ಮೀ)	ಖರ್ಚು ಮಾಡಿದ ಹಣ (ರೂ. ಲಕ್ಷಗಳಲ್ಲಿ)
1.	ಅಲ್ಲೂರ	13 ಹೆ	1.527
2.	ಭೀಮನಹಳ್ಳಿ	20 ಹೆ	2.154
3.	ಅಳ್ಳಳ್ಳಿ	50 ಹೆ	0.710
	ಒಟ್ಟು	83.00 ಹೆ	4.391

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಮೂಲ ಪ್ರಶ್ನೆಯನ್ನೇ ಬದಲಾವಣೆ ಮಾಡಿದ್ದಾರೆ. ನಾನು ಅರಣ್ಯ ಇಲಾಖೆ ಹಾಗೂ ಸಾಮಾಜಿಕ ಅರಣ್ಯ ಇಲಾಖೆಯ ಬಗ್ಗೆ ಕೇಳಿದ್ದೆ. ನಾನು ಕೇಳಿರುವ ಮೂರು ಪ್ರಶ್ನೆಗಳನ್ನು ಒಂದೇ ಮಾಡಿ ಸಾಮಾಜಿಕ ಅರಣ್ಯ ಇಲಾಖೆಯ ಮಾಹಿತಿಯನ್ನೇ ಕಡೆಗಣಿಸಿದ್ದಾರೆ, ಏಕೆ? ಅರಣ್ಯ ಇಲಾಖೆಯ ಸಾಮಾಜಿಕ ಅರಣ್ಯ ಇಲಾಖೆಯವರು ತೋಡಿರುವ ಗುಂಡಿಗಳೆಷ್ಟು? ನೆಟ್ಟಿರುವ ಗಿಡಗಳೆಷ್ಟು? ಮತ್ತು ಈ ಗುಂಡಿಗಳಲ್ಲಿ ಐದಾರು ವರ್ಷಗಳಿಂದ ಯಾವ ಯಾವ ಜಾತಿಯ ಗಿಡಗಳನ್ನು ಬೆಳೆಯಲಾಗಿದೆ? ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೆ. ಅದಕ್ಕೆ ಉತ್ತರವನ್ನೇ ತರಿಸಿಲ್ಲ, ಏಕೆ? ಅರಣ್ಯ ಇಲಾಖೆಯವರು ಸಹಾ ಕಳುಹಿಸಿರುವ ಮಾಹಿತಿ ತಮ್ಮ ಇಲಾಖೆಯ ಮಾಹಿತಿಯನ್ನು ಬಿಟ್ಟು ಸಾಮಾಜಿಕ ಅರಣ್ಯ ಇಲಾಖೆಯವರು ರಸ್ತೆಗಳ ಪಕ್ಕದಲ್ಲಿ ಹಾಕಿರುವ ಗಿಡಗಳ ಮಾಹಿತಿಯನ್ನು ನೀಡಿದ್ದಾರೆ. ಆದರೆ ಯಾವ ಸರ್ವೆ ನಂಬರ್‌ಗಳಲ್ಲಿ ಯಾವ ಗ್ರಮಗಳಲ್ಲಿ ಅರಣ್ಯವನ್ನು ಯಾವ್ಯಾವ ಅರಣ್ಯಗಳ ಅರಣ್ಯ ಬೆಳೆಸಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನೇ ನೀಡಿಲ್ಲ ಏಕೆ? ಇದರ ಅರ್ಥ ಏನು? ಅರಣ್ಯ ಇಲಾಖೆಯವರು ಎಲ್ಲೂ ಸಹಾ ಅರಣ್ಯದಲ್ಲಿ ಗಿಡಗಳನ್ನೇ.....

ಅಧ್ಯಕ್ಷರು : ದಯವಿಟ್ಟು ಮಾನ್ಯ ಸದಸ್ಯರು ಉಪ ಪ್ರಶ್ನೆ ಕೇಳಿ. ಅದನ್ನು ಬಿಟ್ಟು ತಾವು ಇಷ್ಟು ದೀರ್ಘವಾಗಿ ಭಾಷಣ ಮಾಡಿದರೆ ಹೇಗೆ? ನಿಜವಾಗಿ.ನಿಮ್ಮ ಉಪ ಪ್ರಶ್ನೆ ಏನಿದೆ ಅದನ್ನು ಮಾತ್ರ ದಯವಿಟ್ಟು ಕೇಳಿ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಅರಣ್ಯ ಇಲಾಖೆಯವರು ಎಲ್ಲಿಯೂ ಸಹಾ ಅರಣ್ಯವನ್ನು ಬೆಳೆಸಿದ್ದರ ಬಗ್ಗೆ ಇದರಲ್ಲಿ ಮಾಹಿತಿಯೇ ಇಲ್ಲ ಏಕೆ? ಯಾವ ಸರ್ವೆ ನಂಬರ್‌ಗಳಲ್ಲಿ ಯಾವ ಗ್ರಾಮಗಳಲ್ಲಿ ಬೆಳೆಸಿದ್ದಾರೆ? ನಾನು ಗ್ರಾಮಗಳು ಮತ್ತು ಸರ್ವೆ ನಂಬರ್‌ಗಳನ್ನು ಕೇಳಿದ್ದೆ. ಆ ಮಾಹಿತಿ ಕೊಟ್ಟಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಯ ಕಾಪಿ ನನ್ನ ಹತ್ತಿರ ಇದೆ. ಮಾನ್ಯ ಸದಸ್ಯರು ಕಳೆದ ಮೂರು ವರ್ಷಗಳಿಂದ ಗುಲ್ಬರ್ಗಾ ಜಿಲ್ಲೆಯ ಸೇಡಂ ಹಾಗೂ ಚಿತ್ತಾಪುರ ತಾಲ್ಲೂಕಿನ 11 ಗ್ರಾಮಗಳ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯವರು ಅರಣ್ಯ ಸರ್ವೆ ನಂಬರುಗಳಲ್ಲಿ ಹಾಗೂ ಗೈರಾಣ ಸರ್ವೆ ನಂಬರ್‌ಗಳಲ್ಲಿ ಗಿಡಗಳನ್ನು ನೆಡಲು ಖರ್ಚು ಮಾಡಿರುವ ಹಣವೆಷ್ಟು? ಎಂಬ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ನಾನು ಉತ್ತರವನ್ನು ಒದಗಿಸಿದ್ದೇನೆ. ಮಾನ್ಯ ಸದಸ್ಯರು ಕೇಳದೇ ಇರತಕ್ಕ ಪ್ರಶ್ನೆಗೇನೂ ನಾನು ಉತ್ತರ ಒದಗಿಸಿಲ್ಲ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೇ ಉತ್ತರವನ್ನು ಒದಗಿಸಿಕೊಡಲಾಗಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಸನ್ಮಾನ್ಯ ಅಧ್ಯಕ್ಷರೇ, ನನ್ನ ಹತ್ತಿರ ಸಹಾ ನಾನು ಕೇಳಿರುವ ಪ್ರಶ್ನೆಯ ಪ್ರತಿ ಇದೆ. ನಾನು ಅದನ್ನು ತಮಗೆ ಕಳುಹಿಸಿ ಕೊಡುತ್ತಿದ್ದೇನೆ. ಇದರ ಬಗ್ಗೆ ಉತ್ತರವನ್ನೇ ಕೊಟ್ಟಿಲ್ಲ. ನಾನು ಸಾಮಾಜಿಕ ಅರಣ್ಯ ಇಲಾಖೆ ಬಗ್ಗೆ ಕೇಳಿದ್ದೆ.....

ಶ್ರೀ ಕೆ.ಹೆಚ್.ರಂಗನಾಥ್ : ಮಾನ್ಯ ಅಧ್ಯಕ್ಷರೇ, ತಮ್ಮ ಕಛೇರಿಯಿಂದ ನಮಗೆ ಏನು ಪ್ರಶ್ನೆಯನ್ನು ಕಳುಹಿಸಿಕೊಡುತ್ತೀರೋ ಅದಕ್ಕೆ ನಾವು ತಮಗೆ ಉತ್ತರಗಳನ್ನು ಕಳುಹಿಸಿಕೊಡುತ್ತೇವೆ. ಮಾನ್ಯ ಸದಸ್ಯರು ನೇರವಾಗಿ ನನಗೆ ಪ್ರಶ್ನೆಗಳನ್ನು ಕಳುಹಿಸಿ, ನಾನು ಆ ಪ್ರಶ್ನೆಗೆ ಉತ್ತರಗಳನ್ನು ಕಳುಹಿಸಿಕೊಡುವ ವ್ಯವಸ್ಥೆ ಏನಾದರೂ ಇದ್ದರೆ ಆ ಮಾತು ಬೇರೆ?

ಅಧ್ಯಕ್ಷರು : ಮಾನ್ಯ ಬಸವಂತರೆಡ್ಡಿಯವರೇ, ತಾವೇನು ಪ್ರಶ್ನೆ ಕೇಳಿದ್ದೀರೋ ಅದು ಅರ್ಥವೇ ಆಗುವುದಿಲ್ಲ.

ಶ್ರೀ ಬಸವತರೆಡ್ಡಿ ಮೋತಕಪಲ್ಲಿ : ನಾನು ಸಾಮಾಜಿಕ ಅರಣ್ಯ ಮತ್ತು ಅರಣ್ಯ ಇಲಾಖೆ ಎರಡರ ಬಗ್ಗೆ ಮತ್ತು ಯಾವ್ಯಾವ ಸರ್ವೆ ಅರಣ್ಯವನ್ನು ಬೆಳೆಸಿದ್ದಾರೆ ಎಂದು ಪ್ರಶ್ನೆಯನ್ನು ಕೇಳಿದ್ದೆ.

ಅಧ್ಯಕ್ಷರು : ನೀವು ಸ್ಪೆಸಿಫಿಕ್ಕಾಗಿ ಕೇಳಬೇಕು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ನಾನು ನನ್ನ ಸೇಡಂ ಕ್ಷೇತ್ರದಲ್ಲಿ ಯಾವ್ಯಾವ ಸರ್ವೆ ನಂಬರ್‌ಗಳ ಯಾವ್ಯಾವ ಅರಣ್ಯಗಳಲ್ಲಿ ಗಿಡಗಳನ್ನು ಬೆಳೆಸಿದ್ದಾರೆ ಎಂಬ ಬಗ್ಗೆ ಪ್ರಶ್ನೆ ಕೇಳಿದ್ದೆ. ಅದಕ್ಕೆ ಉತ್ತರ ನನಗೆ ಸಿಕ್ಕಿಲ್ಲ. ಕೇವಲ ಸಾಮಾಜಿಕ ಅರಣ್ಯ ಇಲಾಖೆಯವರು ರೋಡ್ ಪಕ್ಕದಲ್ಲಿ ಹಾಕಿರುವ ಗಿಡಗಳ ಬಗ್ಗೆ ಮಾತ್ರ ಮಾಹಿತಿ ಕೊಟ್ಟಿದ್ದಾರೆ.

ಅಧ್ಯಕ್ಷರು : ಮಾನ್ಯ ಬಸವಂತರೆಡ್ಡಿಯವರೇ, ತಾವೇನು ಪ್ರಶ್ನೆಯನ್ನು ಕಳುಹಿಸಿಕೊಟ್ಟಿದ್ದಿರಿ, ಅದನ್ನು ನಮ್ಮ ಆಫೀಸಿನವರು ಸ್ವಲ್ಪ ಮಾರ್ಪಾಡು ಮಾಡಿ ಸಂಬಂಧಪಟ್ಟ ಇಲಾಖೆಗೆ ಕಳುಹಿಸಿಕೊಟ್ಟಿದ್ದಾರೆ. ಹಾಗೆ ಮಾರ್ಪಾಡು ಮಾಡಿ ಕಳುಹಿಸಿಕೊಟ್ಟಿರುವ ಪ್ರಕಾರ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ತಮ್ಮ ಪ್ರಶ್ನೆಗೆ ಡೀಟೈಲ್ಸ್ ಇನ್ನೂ ಏನಾದರೂ ಬೇಕಾಗಿದ್ದರೆ ತಾವು ದಯವಿಟ್ಟು ನನ್ನ ಕೊಠಡಿಗೆ ಬನ್ನಿ.

ಶ್ರೀ ಕೆ.ಹೆಚ್.ರಂಗನಾಥ್ : ಮಾನ್ಯ ಅಧ್ಯಕ್ಷರೇ, ಅರಣ್ಯ ಇಲಾಖೆಯಲ್ಲೇ ಸಾಮಾಜಿಕ ಅರಣ್ಯ ಇಲಾಖೆ ಇದೆ. ಅರಣ್ಯ ಇಲಾಖೆಯೇ ಬೇರೆ ಮತ್ತು ಸಾಮಾಜಿಕ ಅರಣ್ಯ ಇಲಾಖೆಯೇ ಬೇರೆ ಎಂದೇನೂ ಇಲ್ಲ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ರೋಡ್ ಸೈಡ್ ಬೆಳೆಸಿರತಕ್ಕಂಥ ಗಿಡಗಳ ಬಗ್ಗೆ ಮಾಹಿತಿಯನ್ನೂ ಕೂಡ ಕೊಟ್ಟಿದ್ದೇವೆ ಮತ್ತು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ಅರಣ್ಯ ಸರ್ವೆ ಸಂಬರ್‌ಗಳ ಬಗ್ಗೆ ಕೂಡ ಕೊಟ್ಟಿದ್ದೇವೆ. 1997-98ರಿಂದ ಸೇಡಂ ತಾಲ್ಲೂಕಿನಲ್ಲಿ 13 ಗ್ರಾಮಗಳಲ್ಲಿ ಸುಮಾರು 198 ಹೆಕ್ಟೇರ್‌ನಲ್ಲಿ 18 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಗಿಡ ನೆಡಲಾಗಿದೆ. 1998-99ಕ್ಕೆ ಸೇಡಂ ತಾಲ್ಲೂಕಿನಲ್ಲಿ ಸುಮಾರು 19 ಗ್ರಾಮಗಳಲಿ 218 ಹೆಕ್ಟೇರುಗಳಲ್ಲಿ 18 ಲಕ್ಷ 15 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಗಿಡ ನೆಡಲಾಗಿದೆ. 1999-2000ನೇ ಸಾಲಿಗೆ ಸೇಡಂನಲ್ಲಿ ಸುಮಾರು 12 ಗ್ರಾಮಗಳಲ್ಲಿ ಒಟ್ಟು 112 ಹೆಕ್ಟೇರುಗಳಲ್ಲಿ 11 ಲಕ್ಷದ 99 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಗಿಡ ನೆಡಲಾಗಿದೆ. ಹಾಗೆಯೇ ಚಿತ್ತಾಪುರ ತಾಲ್ಲೂಕಿನಲ್ಲಿ 1998-99ಕ್ಕೆ ಅಲ್ಲಿನ 3 ಗ್ರಾಮಗಳಲ್ಲಿ 83 ಹೆಕ್ಟೇರುಗಳಲ್ಲಿ 4 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಗಿಡ ನೆಡಲಾಗಿದೆ. 1999-2000ನೇ ಸಾಲಿನಲ್ಲಿ ಚಿತ್ತಾಪುರ ತಾಲ್ಲೂಕಿನಲಿ ಗಿಡಗಳನ್ನು ನೆಟ್ಟಿಲ್ಲ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೇ, ಅರಣ್ಯ ಇಲಾಖೆಯ ಸರ್ವೆ ನಂಬರ್‌ಗಳನ್ನು ಉತ್ತರದಲ್ಲಿ ತೋರಿಸಿಲ್ಲ. ಯಾವ ಅರಣ್ಯದ ಯಾವ ಸರ್ವೆ ನಂಬರ್‌ಗಳು ಎಂದು ಕೇಳಿದರೆ ನಮಗೆ ಗೊತ್ತಾಗುತ್ತದೆ. ನಮ್ಮ ಸೇಡಂ ತಾಲ್ಲೂಕಿನಲ್ಲಿರುವ ಕೆಲವೊಂದು ಅರಣ್ಯಗಳು ನನಗೆ ಗೊತ್ತಿವೆ. ಎಲ್ಲಿಯೂ ಸಹಾ ಅರಣ್ಯವನ್ನು ಬೆಳೆಸಿಲ್ಲ. ನಾನು ಇದಕ್ಕಿಂತ ಮೊದಲು ಸನ್ಮಾನ್ಯ

ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ನಡೆದಂತಹ ಕೆ.ಡಿ.ಪಿ. ಸಭೆಯಲ್ಲಿ ಸಹಾ ಅರಣ್ಯ ಇಲಾಖೆಯವರನ್ನು ಈ ಬಗ್ಗೆ ಕೇಳಿದ್ದೇನೆ. ಸನ್ಮಾನ್ಯ ಖರ್ಗೆಯವರು ಬೆಳೆಸಿರುವ ಅರಣ್ಯಗಳು ಎಲ್ಲಿವೆ ಎಂಬುದನ್ನು ಮಾನ್ಯ ಶಾಸಕರಿಗತ ತೋರಿಸಿಕೊಂಡು ಬನ್ನಿ ಎಂದೂ ಸಹಾ ಅಧಿಕಾರಿಗಳಿಗೆ ಆಂದು ಆದೇಶ ನೀಡಿದರು. ಆದರೂ ಸಹಾ ಅಧಿಕಾರಿಗಳು ನನಗೆ ಎಲ್ಲಿಯೂ ಸಹಾ ತೋರಿಸಿಲ್ಲ. ರಸ್ತೆ ಪಕ್ಕದಲ್ಲಿ ಏನು ಗಿಡಗಳನ್ನು ಹಾಕಿದ್ದೇವೆ ಎಂದು ಹೇಳುತ್ತಾರೆ, ಅದು ಸ್ವಲ್ಪ ಹೆಚ್ಚು ಕಡಿಮೆ ನಿಜ ಇದೆ. ಆದರೆ ಎಲ್ಲೂ ಸಹಾ ಗೈರಾಣ ಸರ್ವೆ ನಂಬರ್‌ಗಳಲ್ಲಿ ಆಗಲೀ ಅಥವಾ ಯಾವುದೇ ಅರಣ್ಯದ ಭಾಗದಲ್ಲಿಯಾಗಲೀ ಕಳೆದ 5-10 ವರ್ಷಗಳಲ್ಲಿ ಬೆಳೆದಿರುವ ಗಿಡಗಳೇ ಇಲ್ಲ. ಇದರಲ್ಲಿ ಅವ್ಯವಹಾರವಾಗಿರುತ್ತದೆ, ಇದರ ಬಗ್ಗೆ ವಿಚಾರಣೆ ನಡೆಸಿ ಉತ್ತರವನ್ನು ನೀಡಬೇಕು. ಈ ಸದನಕ್ಕೆ ಮಾಹಿತಿಯನ್ನು ಕೊಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಸದಸ್ಯರು ಅರಣ್ಯ ಕೇವಲ ಪೇಪರ್ ಮೇಲೆ ಬೆಳೆದಿದೆ, ಭೂಮಿ ಮೇಲೆ ಬೆಳೆದಿಲ್ಲ. ಎಂದು ಹೇಳುತ್ತಿದ್ದಾರೆ. ಗಿಡ ಬೆಳೆಸಲು ಹಣ ಬಿಡುಗಡೆಯಾಗಿ, ಆದರಲ್ಲಿ ಅವ್ಯವಹಾರವಾಗಿದೆ. ಎಂದು ಮಾನ್ಯ ಹೇಳುತ್ತಿದ್ದಾರೆ.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ನಾನು ಆಗ್ರಹಿಸುತ್ತಿದ್ದೇನೆ.

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ನೆಲಮಂಗಲ ತಾಲ್ಲೂಕಿನಲ್ಲಿ ಆರ್.ಎಫ್.ಓ.ರವರು ಮೀಟಿಂಗ್‌ಗೇ ಬರುತ್ತಿಲ್ಲ.....

ಅಧ್ಯಕ್ಷರು : ತಮ್ಮ ಕಾಮೆಂಟ್ಸ್ ಇಲ್ಲಿ ಬೇಕಾಗಿಲ್ಲ. ಆ ವಿಷಯಕ್ಕೂ ಈ ವಿಷಯಕ್ಕೂ ಸಂಬಂಧ ಇಲ್ಲ. ಮಾನ್ಯ ಸಚಿವರು ಮಾನ್ಯ ಸದಸ್ಯರು ಕೇಳಿದ್ದಕ್ಕೆ ಉತ್ತರ ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳಲಿಕ್ಕೆ ನಾನೂ ಸಹಾ ಬಹಳ ಪ್ರಯಾಸ ಪಡುತ್ತಿದ್ದೇನೆ. ನನಗೆ ಅದು ಏನೂ ಅರ್ಥವಾಗಲಿಲ್ಲ. ಅವರು ಯಾವ್ಯಾವ ಸರ್ವೆ ನಂಬರ್‌ಗಳನ್ನು ಕೊಟ್ಟಿದ್ದರೋ ಅದು ನನಗೆ ಗೊತ್ತಿಲ್ಲ. ಎಲ್ಲೆಲ್ಲಿ ನೆಡುತೋಪುಗಳನ್ನು ಮಾಡಲಾಗಿದೆ ಎಂದು ಕೇಳಿದ್ದಾರೋ ಆ ಗ್ರಾಮಗಳ ವಿವರ ಕೊಟ್ಟಿದ್ದೇವೆ. ಉದಾಹರಣೆಗತ ಹೇಳುವುದಾದರೆ, ಅಂದರಗಿ ಎನ್ನುವ ವಿಲೇಜ್‌ನಲ್ಲಿ 10 ಹೆಕ್ಟೇರುಗಳಲಿ ನೆಡುತೋಪು ಮಾಡಲಾಗಿದೆ. ಅಲ್ಲಿ ನೆಡುತೋಪು ಅರಣ್ಯ ಸರ್ವೆ ನಂಬರ್‌ಗಳಲ್ಲಿ ಮಾಡಲಾಗಿದೆಯೋ ಇಲ್ಲವೋ ಎಂಬ ಬಗ್ಗೆ ಮಾನ್ಯ ಶಾಸಕರು ಪರಿಶೀಲನೆ ಮಾಡಿ ನನಗೆ ಆ ಬಗ್ಗೆ ಪತ್ರ ಬರೆದರೆ, ಅದು ಆಗದೇ ಹೋಗಿದ್ದರೆ ನಾನು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಬಸವಂತರೆಡ್ಡಿಯವರೇ, ಮಾನ್ಯ ಸಚಿವರು ಪತ್ರ ಬರೆಯಿರಿ, ನಾನು ಅದಕ್ಕೆ ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೆ, ಸರ್ವೆ ನಂ. ತೋರಿಸಿಲ್ಲ, ಹಂದರಕಿಯಲ್ಲಿ 10 ಹೆಕ್ಟೇರ್ ಎಂದು ಏನು ಮಾಡಿದ್ದಾರೆ, ಅಲ್ಲಿಯೂ ಇಲ್ಲೂ ಮಾಡಿಲ್ಲ. ನಾನು ಸ್ವತಃ ನೋಡಿದ್ದೇನೆ. ರೋಡ್ ಪಕ್ಕದಲ್ಲಿ ಮಾತ್ರ ಗಿಡಗಳನ್ನು ನೆಟ್ಟಿದ್ದಾರೆ. ಅದು ನಾನು ಒಪ್ಪುತ್ತೇನೆ. ಆದರೆ ಹಂದರಕಿಯಲ್ಲಿ ಅರಣ್ಯ ಇಲಾಖೆಯವರು ಎಲ್ಲಿಯೂ ಸಹ ಗಿಡ ನೆಟ್ಟಿಲ್ಲ.

ಅಧ್ಯಕ್ಷರು : ತಾವು ಮಂತ್ರಿಗಳಿಗತ ಪತ್ರ ಬರೆಯಿರಿ ಅವರ ಉತ್ತರ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಕೆ.ಡಿ.ಪಿ. ಮೀಟಿಂಗ್‌ನಲ್ಲಿ ಇದು ಸೋಷಿಯಲ್ ಫಾರೆಸ್ಟೆರಿಯವರು ಎಲ್ಲೆಲ್ಲಿ ಕೆಲಸ ಮಾಡಿದ್ದಾರೆಂದು ರಿವ್ಯೂ ಆಯಿತು. ರಿವ್ಯೂ ಆದಾರ ಅಧಿಕಾರಿಗಳು ಕೆಲವು ಸರ್ವೆ ನಂಬರ್‌ಗಳಲ್ಲಿ ನಾವು ಈ ಕೆಲಸ ತೆಗೆದುಕೊಂಡಿದ್ದೇವೆಂದು ಹಂದರಕಿ ಮತ್ತು ಮೋತಕಪಲ್ಲಿ ಮತ್ತು ಅವರ ಕಡೆ ಇರತಕ್ಕಂತಹ ಕೆಲವು ಊರುಗಳು ಆ ಏರಿಯಾದಲ್ಲಿ ನಾವು ಕೆಲಸ ತೆಗೆದುಕೊಂಡಿದ್ದೇವೆಂದು ಹೇಳಿದರು. ನಾನು ಹೇಳಿದೆ, ಒಂದು ದಿವಸ ಶಾಸಕರಿಗತ ನೀವು ಕರೆದುಕೊಂಡು ಹೋಗಿ ಯಾವ ಯಾವ ಸರ್ವೇ ನಂಬರ್‌ನಲ್ಲಿ ಸೋಷಿಯಲ್ ಫಾರೆಸ್ಟ್ರಿ ಸ್ಕೀಮ್‌ನಲ್ಲಿ ಕೆಲಸ ಆಗಿದೆ, ಆ ಯೋಜನೆ ಅವರಿಗೆ ತೋರಿಸಿ ಎಂದು ಒಂದು ವೇಳೆ ಇಲ್ಲವೆಂದರೆ ನಾವು ಆ್ಯಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಆ ಮೀಟಿಂಗ್‌ನಲ್ಲಿ ನಾನು ಹೇಳಿದ್ದೆ. ಅದರ ಪ್ರಕಾರ ಅವರು ನನಗೆ ಕರೆದುಕೊಂಡು ಹೋಗಿಲ್ಲವೆಂದು ಹೇಳಬಹುದು. ಎಲ್ಲೆಲ್ಲಿ ಆ ಯೋಜನೆಗಳನ್ನು ಅವರು ಮಾಡಿದ್ದಾರೆಂಯ ತೋರಿಸದೆ ಇರಬಹುದು. ಅನೇಕ ಕಡೆ ಕೆಲವು ದೂರುಗಳು ಬಂದ ಮೇಲೆ ನಾವು ಆ ಮೀಟಿಂಗ್‌ನಲ್ಲಿ, ಶಾಸಕರು ಇದ್ದಾರೆ ಅವರು ಪ್ರತ್ಯಕ್ಷವಾಗಿ ಅವರ ಕೌನ್‌ಸ್ಟಿಟ್ಯೂಯನ್ಸಿಯಲ್ಲಿ ಹೀಗಾದಾಗ ಅವರ ಗಮನಕ್ಕೆ ತರಬೇಕೆಂದು ಹೇಳಿದಾಗ ಕೆಲವು ಸಾರಿ ಅಧಿಕಾರಿಗಳು ಕರೆದುಕಯಂಡು ಹೋಗುತ್ತೇವೆಂದು ಹೇಳಿ ಮುಂದೆ ಬಹುಶಃ ಆಯ ಆಗದೆ ಇರಬಹುದು ಎಂದು ಕರೆದುಕೊಂಡು ಹೋಗಿಲ್ಲ. ಅದಕ್ಕಾಗಿ ಅವರು ಈ ಪ್ರಶ್ನೆ ಕೇಳುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅವರು ಪತ್ರ ಬರೆಯಲ್ಲಿ ಡೀಟೇಲ್ಸ್ ಕಳುಹಿಸುತ್ತೇವೆಂದು ಹೇಳಿದ್ದಾರೆ.

ಉಡುಪಿಯಲ್ಲಿ ಜಿಲ್ಲಾ ನ್ಯಾಯಾಲಯದ ಪ್ರಾರಂಭ

135 (1062) ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿಯಲ್ಲಿ ಜಿಲ್ಲಾ ನ್ಯಾಯಾಲಯವನ್ನು ಯಾವಾಗಿನಿಂದ ಪ್ರಾರಂಭ ಮಾಡಲಾಗುವುದು? ಜಿಲ್ಲಾ ನ್ಯಾಯಾಲಯಕ್ಕೆ ಬೇಕಾಗುವ ಕಟ್ಟಡ ಇತ್ಯಾದಿ ಸೌಲಭ್ಯಗಳನ್ನು ಒದಗಿಸಿಕೊಡಲು ಅಂದಾಜು ಮಾಡಿ ಕ್ರಮ ಜರುಗಿಸಲಾಗಿದೆಯೇ?

ಆ) ನ್ಯಾಯಾಲಯ ಸೌಲಭ್ಯಕ್ಕಾಗಿ ಒದಗಿಸಲಾಗಿರುವ ಅನುದಾನದ ಮೊತ್ತ ಎಷ್ಟು? ಅದರ ಪ್ಲಾನ್ ಇತ್ಯಾದಿಗಳು ಅನುಮೋದನೆಯನ್ನು ಪಡೆದಿದೆಯೇ? ಈ ರೀತಿ ಉಂಟಾಗುತ್ತಿರುವ ವಿಳಂಬಕ್ಕೆ ಕಾರಣಗಳೇನು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಉಡುಪಿಯಲ್ಲಿ ಸ್ಥಳಾವಕಾಶ ದೊರೆತ ನಂತರ ಕೂಡಲೇ ಪ್ರಾರಂಭ ಮಾಡಲಾಗುವುದು. ಈಗ ಇರುವ ನ್ಯಾಯಾಲಯದ ಅವರಣದಲಿ ಉಡುಪಿಯಲ್ಲಿ ನ್ಯಾಯಾಲಯ ಸಂಕೀರ್ಣ ನಿರ್ಮಿಸಲು ನಕ್ಷೆಯನ್ನು ಅನುಮೋದಿಸಿದ್ದು, ಯೋಜನೆ ಮತ್ತು ಅಂದಾಜು ಪಟ್ಟಿಯನ್ನು